ರಸ್ತೆಗಳ ಅಗಲೀಕರಣ ಅಭಿವೃದ್ಧಿ ಯೋಜನೆ

1172(1710); ಶ್ರೀ ಚೆಲುವರಾಯಸ್ವಾಮಿ ಎನ್. (ನಾಗಮಂಗಲ)

ಅ) ಬೆಂಗಳೂರು ಮಹಾನಗರದಲ್ಲಿ ನಾಲ್ಕು ಎಲಿವೇಟೆಡ್ ಕಾರಿಡಾರ್‌ಗಳನ್ನು ರಚಿಸಲು ಉದ್ದೇಶಿಸಲಾಗಿದೆಯೇ; ಈ ಬಗ್ಗೆ ವಿಸ್ತೃತ ಯೋಜನೆ ವರದಿ (ಡಿಪಿಆರ್) ಸಿದ್ದಪಡಿಸಲು ಕ್ರಮ ತೆಗೆದುಕೊಳ್ಳಲಾಗಿದೆಯೇ;

ಆ) ಸಿಲ್ಕ್ ಬೋರ್ಡ್ ಜಂಕ್ಷನ್‌ನ್ನು ಹೆಬ್ಬಾಳ ಫ್ಲೈಓವರ್ ಮಾದರಿಯಲ್ಲಿ ರಚಿಸುವ ಮೂಲಕ ಈ ಜಂಕ್ಷನ್‌ನಲ್ಲಿ ಉಂಟಾಗುತ್ತಿರುವ ವಾಹನ ಸಾರಿಗೆ ಒತ್ತಡವನ್ನು ಕಡಿಮೆ ಮಾಡಲು ಕ್ರಮ ಜರುಗಿಸಲಾಗುವುದೇ;

ಇ) ಬನ್ನೇರುಘಟ್ಟ ರಸ್ತೆಯ ಕೊಪ್ಪಗೇಟ್‌ನಿಂದ ಬೇಗೂರು ಮೂಲಕ ಬೊಮ್ಮನಹಳ್ಳಿ ಸೇರುವ ರಸ್ತೆಯ ಅಗಲೀಕರಣ ಮತ್ತು ಬೇಗೂರು–ಕೂಡ್ಲುಗೇಟ್, ಕೂಡ್ಲುಗೇಟ್–ಸರ್ಜಾಪುರ ರಸ್ತೆಯ ಅಗಲೀಕರಣ ಮತ್ತು ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗುವುದೇ?

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು)

ಅ) ಬೆಂಗಳೂರು ನಗರದಲ್ಲಿ ವಾಹನ ಸಂಚಾರದ ಒತ್ತಡವನ್ನು ಕಡಿಮೆಗೊಳಿಸಲು, ವಾಹನಗಳ ಸುಗಮ ಸಂಚಾರಕ್ಕೆ ನಗರದ ಪೂರ್ವದಿಂದ ಪಶ್ಚಿಮ–2 ಎಲಿವೇಟೆಡ್ ಕಾರಿಡಾರ್ ಹಾಗೂ ಉತ್ತರದಿಂದ ದಕ್ಷಿಣ–1 ಎಲಿವೇಟೆಡ್ ಕಾರಿಡಾರ್‌ಗಳನ್ನು ನಿರ್ಮಾಣ ಮಾಡುವ ಸಲುವಾಗಿ ಪ್ರಾಥಮಿಕ ಯೋಜನಾ ವರದಿಯನ್ನು (Pre-feasibility Report) ತಯಾರಿಸಲಾಗಿರುತ್ತದೆ. ಸುಮಾರು 78.00 ಕಿ.ಮೀ ಉದ್ದದ, ನಗರದ ಪ್ರಮುಖ ಕಾರಿಡಾರ್‌ಗಳಲ್ಲಿ ಹಾದು ಹೋಗುವಂತೆ, ನಗರದ ಒಂದು ಭಾಗದಿಂದ ಇನ್ನೊಂದು ಭಾಗಕ್ಕೆ ಅತ್ಯಲ್ಪ ಅವಧಿಯಲ್ಲಿ ಸುಗಮವಾಗಿ ಸಂಚರಿಸಲು ಈ ರೀತಿ ಎಲಿವೇಟೆಡ್ ಕಾರಿಡಾರ್ ನಿರ್ಮಿಸಿದ ಪಕ್ಷದಲ್ಲಿ ಅನುಕೂಲವಾಗುವುದೆಂದು ಭಾವಿಸಿ, ಪ್ರಾಥಮಿಕ ಯೋಜನಾ ವರದಿಯನ್ನು (Pre-feasibility Report) ತಯಾರಿಸಲಾಗಿರುತ್ತದೆ.

ಇತ್ತೀಚೆಗೆ ಈ ಎಲಿವೇಟೆಡ್ ಕಾರಿಡಾರ್ 'ಯೋಜನಾ ವರದಿ' ಯನ್ನು ತಯಾರಿಸುವಂತೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಸೂಚಿಸಲಾಗಿದೆ.

ಬೆಂಗಳೂರಿನ ಚಾಲುಕ್ಯ ವೃತ್ತದಿಂದ ಹೆಬ್ಬಾಳ ಜಂಕ್ಷನ್‌ವರೆಗೆ ಸಂಪರ್ಕ ಕಲ್ಪಿಸಲು 6 ಪಥದ ಮೇಲು ರಸ್ತೆಯನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಕೈಗೆತ್ತಿಕೊಳ್ಳಲಾಗಿದ್ದು, ವಿಸ್ತೃತ ಯೋಜನಾ ವರದಿ ತಯಾರಿಸಲು ಮೆ॥ಸ್ಟುಪ್ ಕನ್ಸಲ್‌ಟೆಂಟ್ ರವರಿಗೆ ವಹಿಸಲಾಗಿದೆ. ಯೋಜನೆಗೆ ರೂ.1350.00 ಕೋಟಿಗಳಿಗೆ ಅಂದಾಜು ತಯಾರಿಸಿ ಸಲ್ಲಿಸಿದ್ದರ ಮೇರೆಗೆ ಪ್ರಾಧಿಕಾರದ ಸಭೆಯ ದಿನಾಂಕ: 07–04–2015 ರಲ್ಲಿ ವಿಷಯ ಸಂಖ್ಯೆ:42/15 ರಲ್ಲಿ ಆಡಳಿತಾತ್ಮಕ ಅನುಮೋದನೆ ಪಡೆಯಲಾಗಿರುತ್ತದೆ.

ಆ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ಯಾವುದೇ ಪ್ರಸ್ತಾವನೆ ಇರುವುದಿಲ್ಲ.

ಇ) ಬನ್ನೇರುಘಟ್ಟ ರಸ್ತೆಯ ಕೊಪ್ಪಗೇಟ್‌ನಿಂದ ಬೇಗೂರು ಮೂಲಕ ಬೊಮ್ಮನಹಳ್ಳಿ ಸೇರುವ ರಸ್ತೆಯು ಸುಮಾರು 9.00 ಕಿಮೀ ಉದ್ದವಿದ್ದು, ಪರಿಷ್ಕೃತ ಮಹಾನಕ್ಷೆ–2015 (Revised Master Plan-2015) ಪ್ರಕಾರ 24.00 ಮೀಟರ್‌ಗೆ ಅಗಲೀಕರಣಗೊಳಿಸುವ ಪ್ರಸ್ತಾವನೆ ಇರುತ್ತದೆ. 2014–15ನೇ ಸಾಲಿನ ಸನ್ಮಾನ್ಯ ಮುಖ್ಯಮಂತ್ರಿಗಳ ನಗರೋತ್ಥಾನ ಯೋಜನೆ ಅಡಿಯಲ್ಲಿ ಅನುಮೋದನೆಗೊಂಡಿರುವ "ಬೇಗೂರು–ಕೊಪ್ಪ ರಸ್ತೆಯ (ಬೇಗೂರು ನಿಂದ ಬಿಬಿಎಂಪಿ ಪರಿಮಿತಿ ನೈಸ್ ರಸ್ತೆ ವರೆಗೆ) ಅಗಲೀಕರಣ" ಕಾಮಗಾರಿಯನ್ನು ಅನುಷ್ಠಾನಗೊಳಿಸಲು ರೂ.450.00 ಲಕ್ಷಗಳ ಅನುದಾನ ಒದಗಿಸಿದ್ದು ಈಗಾಗಲೇ ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.

ಬೆಂಗೂರು ಗ್ರಾಮದಿಂದ ಮಣಿಪಾಲ್ ಕೌಂಟಿ ಮುಖೇನ ಹೊಸೂರು ರಸ್ತೆಯ ಸಂಪರ್ಕ ಕಲ್ಪಿಸುವ ರಸ್ತೆಯನ್ನು ಪರಿಷ್ಕೃತ ಮಹಾನಕ್ಷೆ–2015 (Revised Master Plan-2015) ಪ್ರಕಾರ 18.00 ಮೀ. ಗಳಿಗೆ ಅಗಲೀಕರಣಗೊಳಿಸಲು ಉದ್ದೇಶಿಸಿದ್ದು, ಸುಮಾರು 3 ಕಿ.ಮೀ ಉದ್ದದ ರಸ್ತೆಯನ್ನು ಅಗಲೀಕರಣಗೊಳಿಸುವ ಕಾಮಗಾರಿಯು ಅನುಮೋದನೆಗೊಂಡಿದ್ದು, ಈಗಾಗಲೇ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದ್ದು, ಸದ್ಯದಲ್ಲಿಯೇ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.

ಕೂಡ್ಲುಗೇಟ್–ಸರ್ಜಾಪುರ ರಸ್ತೆಗೆ ಸಂಬಂಧಿಸಿದಂತೆ ಕೂಡ್ಲುಗೇಟ್‌ನಿಂದ ಹರಳೂರು ರಸ್ತೆ ಜಂಕ್ಷನ್‌ವರೆಗೆ ಒಟ್ಟು 2.3 ಕಿ.ಮೀ ಉದ್ದದ ರಸ್ತೆಯನ್ನು ಈಗಾಗಲೇ ಡಾಂಬರೀಕರಣಗೊಳಿಸಿ ಅಭಿವೃದ್ಧಿ ಪಡಿಸಲಾಗಿರುತ್ತದೆ. ಕೂಡ್ಲುಗೇಟ್–ಸರ್ಜಾಪುರ ರಸ್ತೆಯು ಪರಿಷ್ಕೃತ ಮಹಾನಕ್ಷೆ–2015 ಪ್ರಕಾರ 15.00ಮೀ ಹಾಗೂ 24.00 ಮೀ ಅಗಲಕ್ಕೆ ಅಗಲೀಕರಣಗೊಳಿಸುವ ಪ್ರಸ್ತಾವನೆ ಇದ್ದು. ಈವರೆಗೆ ಯಾವುದೇ ಅಗಲೀಕರಣ ಕಾಮಗಾರಿಯನ್ನು ಕೈಗೊಂಡಿರುವುದಿಲ್ಲ.

ಚೆಕ್‌ಪೋಸ್ಟ್‌ಗಳು

1174(883); ಡಾ॥ ಮಾಲಕ ರೆಡ್ಡಿ ಎ.ಬಿ. (ಯಾದಗಿರಿ)

ಅ) ಯಾದಗಿರಿ, ರಾಯಚೂರು, ಕೊಪ್ಪಳ ಹಾಗೂ ಬಾಗಲಕೋಟೆ ಜಿಲ್ಲೆಗಳಲ್ಲಿನ ಅಕ್ರಮ ಕಲ್ಲು ಗಣಿಗಾರಿಕೆ ಮತ್ತು ಸಾಗಾಟವನ್ನು ತಡೆಯಲು ಆಯಕಟ್ಟಿನ ಸ್ಥಳಗಳಲ್ಲಿ ತನಿಖಾ ಠಾಣೆ/ಚೆಕ್ ಪೋಸ್ಟ್‌ಗಳನ್ನು ಸ್ಥಾಪಿಸಲಾಗಿದೆಯೇ;

ಆ) ಹಾಗಿದ್ದಲ್ಲಿ, ಈ ಜಿಲ್ಲೆಗಳ ಆಯಕಟ್ಟಿನ ಸ್ಥಳಗಳಲ್ಲಿ ಚೆಕ್ ಪೋಸ್ಟ್ ಸ್ಥಾಪಿಸಲು 2014–15 ನೇ ಸಾಲಿನಲ್ಲಿ ಬಿಡುಗಡೆ ಮಾಡಿದ 50 ಲಕ್ಷ